ಮೌಖಿಕ ಪರೀಕ್ಷೆ ಮೂಲಕ ನೇಮಕಾತಿ ಮಾಡಬೇಕಾದ ಹುದ್ದೆಗಳಿಗೆ ಸಂದರ್ಶನವನ್ನು ೧೯೮೫ರ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ನಡೆಸಲು ಗೊತ್ತುಪಡಿಸಲಾಗಿತ್ತು. ಆದರೆ, ಈ ಮಧ್ಯೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈ ವಿಶೇಷ ನೇಮಕಾತಿ ನಿಯಮಾವಳಿಯ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಲೋಕೋಪಯೋಗಿ ಇಲಾಖೆಯ ಕೆಲವು ಇಂಜಿನಿಯರುಗಳು ರಿಟ್ ಅರ್ಜಿ ಸಲ್ಲಿಸಿದ್ದಾರೆ. ಈ ರಿಟ್ ಅರ್ಜಿಯನ್ನು ಅಂಗೀಕರಿಸಿದ ನ್ಯಾಯಾಲಯವು ನೇಮಕಾತಿ ನಿಯಮಾವಳಿಯ ಕಾರ್ಯಾಚರಣೆಗೆ ತಡೆಯಾಜ್ಞೆ ನೀಡಿದೆ. ಆದುದರಿಂದ ಅಭ್ಯರ್ಥಿಗಳ ಆಯ್ಕೆ ಕೆಲಸವನ್ನು ಸಧ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ತಡೆಯಾಜ್ಞೆ ತೆರವು ಮಾಡುವಂತೆ ರಾಜ್ಯ ಸರ್ಕಾರವು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯವು ಪರಿಶೀಲಿಸಿ ತಡೆಯಾಜ್ಞೆ ತೆರವು ಮಾಡಲು ನಿರಾಕರಿಸಿತು. ಈ ರಿಟ್ ಅರ್ಜಿಗಳ ಮೇಲೆ ನ್ಯಾಯಾಲಯವು ನೀಡಬಹುದಾದ ಆಂತಿಮ ತೀರ್ಪಿಗಾಗಿ ಕಾಯಲಾಗುತ್ತಿದೆ.

ಸಚಿವರುಗಳು ಖಾಸಗಿ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆ ಕುರಿತು.

೨೪೯. ಶ್ರೀ ಮಲ್ಲಾರಿ ಗೌಡ ಪಾಟೀಲ್ (ಸಂಕೇಶ್ವರ) ಮತ್ತು ಶ್ರೀ ಜಿ. ಎಸ್. ಆಚಾರ್, (ಬೈಂದೂರು).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ದೊರೆಯುವ ಚಿಕಿತ್ಸೆ ಶುಶ್ರೂಷೆ ಹಾಗೂ ಅಲ್ಲಿರುವ ತಜ್ಞ ವೈದ್ಯರುಗಳ ಮಟ್ಟ ರಾಜ್ಯದಲ್ಲಿರುವ ಖಾಸಗಿ ಆಸ್ಪತ್ರೆಗಳಿಗಿಂತ ಉತ್ತಮವಾಗಿದೆ ಎಂದು ಸರಕಾರದವರು ಭಾವಿಸುತ್ತಾರೆಯೇ?

ಆ) ೧೯೮೫ ಮತ್ತು ೧೯೮೬ರಲ್ಲಿ ಯಾವ ಯಾವ ಸಚಿವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಲುವಾಗಿ ಸರ್ಕಾರಕ್ಕೆ ಎಷ್ಟೆಷ್ಟು ವೆಚ್ಚ ತಗಲಿದೆ.

ಇ) ವಿದೇಶದಲ್ಲಿ ಚಿಕಿತ್ಸೆ ಪಡೆದ ಸಲುವಾಗಿ ಯಾವ ಯಾವ ಸಚಿವರಿಗೆ ಸರಕಾರದಿಂದ ಎಷ್ಟೆಷ್ಟು ಖರ್ಚಾಗಿದೆ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಹೋಲಿಕೆಯ ಅಧ್ಯಯನ ಸರ್ಕಾರ ಮಾಡಿರುವುದಿಲ್ಲ.

ಆ) ಸರ್ಕಾರಕ್ಕೆ ಯಾವ ವೆಚ್ಚವಿಲ್ಲ.

ಇ) ಸರ್ಕಾರದಿಂದ ಯಾವ ಖರ್ಚಿಲ್ಲ.

ವೈದ್ಯಕೀಯದಲ್ಲಿನ ವಿದ್ಯಾಭ್ಯಾಸದಲ್ಲಿನ ಕೊಡುಗೆ ಹಾವಳಿ ಬಗ್ಗೆ.

೯. ಶ್ರೀ ಆರ್. ವೆಂಕಟರಾವಮ್ಮ (ಮುಳಬಾಗಿಲು).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧. ರಾಜ್ಯದಲ್ಲಿ ಚಾಲ್ತಿಯಲ್ಲಿರುವ ವಿವಿಧ ವೈದ್ಯಕೀಯ ಕಾಲೇಜುಗಳೆಷ್ಟು? ಅವುಗಳಲ್ಲಿ ಸರಕಾರಿ ಕಾಲೇಜುಗಳ ಮತ್ತು ಖಾಸಗಿ ಕಾಲೇಜುಗಳ ಸಂಖ್ಯೆ ಎಷ್ಟು?

೨. ಖಾಸಗಿ ಕಾಲೇಜುಗಳಲ್ಲಿ ಪಿಡುಗಾಗಿರುವ ಕೊಡುಗೆ ಹಾವಳಿ ಮತ್ತು ಅದರಲ್ಲಿ ವಿವಿಧ ರಾಜ್ಯಗಳ ವಿದ್ಯಾರ್ಥಿಗಳಿಗೂ ಹೊರದೇಶದವರಿಗೂ ವಿಧಿಸುವ ಡೋನೇಷನ್ ತಾರತಮ್ಯ ಸರ್ಕಾರದವರ ಗಮನಕ್ಕೆ ಬಂದಿದೆಯೆ, ಇದನ್ನು ನಿವಾರಿಸಿ ಸಾಮಾನ್ಯ ಜನತೆಗೂ ವೈದ್ಯಕೀಯ ವಿದ್ಯಾಭ್ಯಾಸ ನಡೆಸಲು ಸರ್ಕಾರದವರು ಅನುವು ಮಾಡಿಕೊಡುವರೆ ?

೩. ಖಾಸಗೀ ಕಾಲೇಜುಗಳಲ್ಲಿ ವೈದ್ಯಕೀಯ, ದಂತವೈದ್ಯ, ಬಿ. ಫಾರ್ಮ, ಡಿ. ಫಾರ್ಮ ಈ ಕೋರ್ಸುಗಳಿಗೆ ವಾ,ಸಂಗಕ್ಕೆ ಸರ್ಕಾರದವರು ನಿಯಂತ್ರಿಸಿರುವ ಕೊಡುಗೆ ಮೊತ್ತ ವೆಷ್ಟು ? ಅಥವಾ ಸರ್ಕಾರದವರು ಕೊಡುಗೆ ಬಗ್ಗೆ ಯಾವ ನಿಯಂತ್ರಣ ಸೂಚನೆಯನ್ನು ನೀಡಿದ್ದಾರೆ ?

೪. ಕೊಡುಗೆ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳ ಲೂಟಿ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ? ಈ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆ?

೫. ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರದವರು ನಿಯೋಜಿಸಿರುವುದಕ್ಕಿಂತ ಹೆಚ್ಚಿನ ಸೀಟುಗಳನ್ನು ನೀಡಿರುವ ಕಾಲೇಜುಗಳು ಯಾವುವು? ಈ ರೀತಿ ಸರ್ಕಾರದ ಸೂಚನೆ ಮೀರಿರುವ ಕಾಲೇಜುಗಳ ಬಗ್ಗೆ ವಿಶ್ವವಿದ್ಯಾನಿಲಯ ಅಥವಾ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) —

೧. ರಾಜ್ಯದಲ್ಲಿ ಒಟ್ಟು ೧೬ ವೈದ್ಯಕೀಯ ಕಾಲೇಜುಗಳು ಚಾಲ್ತಿಯಲ್ಲಿ ಇರುತ್ತವೆ. ಅವುಗಳ ಪೈಕಿ ೪ ಸರ್ಕಾರಿ ಮತ್ತು ೧೨ ಖಾಸಗಿ ಕಾಲೇಜುಗಳಾಗಿರುತ್ತವೆ.

೨. ವಿದ್ಯಾಸಂಸ್ಥೆಗಳಲ್ಲಿ ಕ್ಯಾಪಿಟೇಷನ್ ಶುಲ್ಕ ವಸೂಲಾತಿಯನ್ನು ವಿರೋಧಿಸುವ ೧೯೮೪ರ ಕಾಯಿದೆ ದಿನಾಂಕ ೧೧-೭-೧೯೮೫ ರಿಂದ ಜಾರಿಗೆ ಬರುವ ಮೊದಲು ಪ್ರಾರಂಭವಾದ ಖಾಸಗಿ ಕಾಲೇಜುಗಳು ಮಾತ್ರ ೫ ವರ್ಷಗಳವರೆಗೆ ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡಲು ಅವಕಾಶ ವಿರುತ್ತದೆ ಇಂಥಹ ಕಾಲೇಜುಗಳಲ್ಲಿ ವಿದೇಶಿ ಮತ್ತು ಭಾರತದ ನಿವಾಸಿಗಳಲ್ಲದ ವಿದ್ಯಾರ್ಥಿಗಳಿಗೆ ರೂ. ೨ ಲಕ್ಷ ಮತ್ತು ಇತರರಿಗೆ ರೂ. ೧.೫ ಲಕ್ಷ ಕ್ಯಾಪಿಟೇಷನ್ ಶುಲ್ಕ ಪಡೆಯಲು ನಿಗಧಿಪಡಿಸಿದೆ. ಸರ್ಕಾರಿ ಕಾಲೇಜುಗಳಲ್ಲಿ ಮತ್ತು ಖಾಸಗಿ ಕಾಲೇಜುಗಳಲ್ಲಿ ಸರ್ಕಾರದ ವತಿಯಿಂದ ತುಂಬಲು ಲಭ್ಯವಿರುವ ಸೀಟುಗಳಿಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಂದ ಯಾವುದೇ ಕ್ಯಾಪಿಟೇಷನ್ ಶುಲ್ಕ ಪಡೆಯುತ್ತಿಲ್ಲ ಆದಕಾರಣ ಸರ್ಕಾರಿ ಸೀಟುಗಳಲ್ಲಿ ಪ್ರವೇಶ ಪಡೆದು ವೈದ್ಯಕೀಯ ವಿದ್ಯಾಭ್ಯಾಸ ನಡೆಸಲು ಸಾಮಾನ್ಯ ಜನತೆಗೆ ತೊಂದರೆ ಇರುವುದಿಲ್ಲ.

೩. ದಿನಾಂಕ ೧೧-೭-೧೯೮೫ರ ಮೊದಲಿಗೆ ಪ್ರಾರಂಭವಾದ ಖಾಸಗಿ ವೈದ್ಯಕೀಯ ಕಾಲೇಜು ಗಳಲ್ಲಿ ಪ್ರವೇಶ ಪಡೆಯಲು ವಿದೇಶಿ ಮತ್ತು ಭಾರತದ ನಿವಾಸಿಗಳಲ್ಲದ ವಿದ್ಯಾರ್ಥಿಗಳಿಗೆ ರೂ. ೨ ಲಕ್ಷ ಮತ್ತು ಇತರರಿಗೆ ರೂ. ೧.೫ ಲಕ್ಷ ಕ್ಯಾಪಿಟೇಷನ್ ಶುಲ್ಕ ನಿಗದಿ ಮಾಡಿದೆ.

ಮೊದಲನೆಯ ವರ್ಷ ಡಿ. ಫಾರ್ಮ ಕೋರ್ಸಿಗೆ ಶೇಕಡ ೪೦ ಸೀಟುಗಳನ್ನು ರೂ. ೩,೦೦೦ ದಂತೆ ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೂ, ಉಳಿದ ಶೇಕಡ ೨೦ ಸೀಟುಗಳನ್ನು ರೂ. ೫,೦೦೦ ದಂತೆ ಹೊರ ರಾಜ್ಯಗಳ ಅಭ್ಯರ್ಥಿಗಳಿಗೂ ನಿಗದಿ ಪಡಿಸಲಾಗಿದೆ.

ಎರಡನೇ ವರ್ಷ ಡಿ. ಫಾರ್ಮ ಕೋರ್ಸಿಗೆ ನೇರ ಪ್ರವೇಶಕ್ಕೆ ರೂ. ೪,೦೦೦ ಮೀರದಂತೆ ಕರ್ನಾಟಕ ರಾಜ್ಯ ಅಭ್ಯರ್ಥಿಗಳಿಗೂ, ಹಾಗೂ ರೂ. ೫,೦೦೦ ಹೊರ ರಾಜ್ಯ ಅಭ್ಯರ್ಥಿಗಳಿಗೂ ಮತ್ತು ಬಿ. ಫಾರ್ಮ ಕೋರ್ಸಿಗೆ ರೂ. ೧೦,೦೦೦ ಮೀರದಂತೆ ಕರ್ನಾಟಕ ರಾಜ್ಯ ಅಭ್ಯರ್ಥಿಗಳಿಂದಲೂ, ಹಾಗೂ ರೂ. ೨೦,೦೦೦ ಮೀರದಂತೆ ಹೊರ ರಾಜ್ಯಗಳಿಂದ ಬರುವ ಅಭ್ಯರ್ಥಿಗಳಿಗೂ ನಿಗದಿ ಪಡಿಸಲಾಗಿದೆ.

ದಂತ ವೈದ್ಯ ಶಿಕ್ಷಣ ಕಾಲೇಜುಗಳಿಗೆ ಪ್ರವೇಶ ಪಡೆಯಲು ಕ್ಯಾಪಿಟೇಷನ್ ಫೀಜು ನಿಗಧಿ ಮಾಡಿರುವುದಿಲ್ಲ .....

೪. ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಯಾವುದೇ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

೫. ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ ನಿಗಧಿ ಪಡಿಸಿರುವ ಸೀಟುಗಳ ಸಂಖ್ಯೆಗಿಂತ ಹೆಚ್ಚಿಗೆ ವಿದ್ಯಾರ್ಥಿಗಳಿಗೆ ೮೫-೮೬ನೇ ಸಾಲಿಗೆ ಪ್ರವೇಶ ನೀಡಿರುವುದು ತಿಳಿದು ಬಂದಿದೆ. ಈ ಬಗ್ಗೆ ಏನು ಕ್ರಮ ಕೈಗೊಳ್ಳ ಬೇಕೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.